ರೆಡ್ಡಿಯಾರಿನ ಹೋಟಲನ್ನು ಹಾದುಹೋಗುವ ಸಮಯದಲ್ಲಿ ಅಪ್ಪ 'ನಿಲ್ಲೋ' ಎಂದ. ಮುತ್ತುಸಾಮಿಗೆ ಅವಸರದಲ್ಲಿ ಸೈಕಲನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ತಿಳಿಯಲಿಲ್ಲ. ಆರೇಳು ಅಡಿಗಳು ಮುಂದಕ್ಕೆ ಹೋದನಂತರವೇ ನಿಲ್ಲಿಸಿದ.

'ಏನಾದ್ರೂ ತಿಂತೀಯಾ?' ಎಂದು ಕೇಳಿದರು. ಅವಸರದಿಂದ ತಲೆ ಅಲ್ಲಾಡಿಸುತ್ತಾ 'ಬೇಡಾಪ್ಪ ಮನೆಗೆ ಹೋಗೋಣಾ' ಎಂದ. ಅದಕ್ಕೆ ಅವರು 'ಮನೆ ಮನೆ ಅಂತಾ ಯಾಕ್ ಸಾಯ್ತೀಯೋ? ಮನೇನಲ್ಲೇನು ನಿಧಿ ಹೂತಿಟ್ಟಿದೀಯಾ?' ಎಂದು ಉರಿದುಬಿದ್ದರು. ಯಾವ ಉತ್ತರವನ್ನೂ ಹೇಳದೇ ಅವನು ಅವರ ಕಾಲುಗಳನ್ನೇ ನೋಡುತ್ತಾ ನಿಂತಿದ್ದ. 'ನಿಂತಿದ್ದಾನೆ ನೋಡು ಒಳ್ಳೇ ಪೊರಕೆಕಡ್ಡಿ ತರಾ' ಎಂದು ಗೊಣಗುತ್ತಾ ಪಂಚೆಯನ್ನು ಎತ್ತಿ ಕಟ್ಟಿಕೊಂಡರು. ಮತ್ತೆ ಶಾಂತವಾದ ದನಿಯಲ್ಲಿ 'ನಿನ್ನ ನೋಡಿದ್ರೆ ಎಸ್ಸೆಸ್ಸೆಲ್ಸಿ ಓದೋ ಹುಡುಗನ ತರಾನಾ ಕಾಣ್ತೇ? ಜೋರಾಗಿ ಊದಿದ್ರೆ ಬಿದ್ಹೋಗೊ ಹಾಗಿದ್ದೀಯ. ವಯಸ್ಸಿಗೆ ಬಂದ ಹುಡುಗ ಚೆನ್ನಾಗಿ ತಿಂದ್ರಲ್ವೇ ಶಕ್ತಿ ಬರೋದು' ಎಂದರು. 'ಇಲ್ಲಾಪ್ಪಾ ಬೇಡಾ' ಎಂದು ಅವನು ಹೇಳಿದ್ದನ್ನು ಅವರು ಕಿವಿಗೇ ಹಾಕಿಕೊಳ್ಳಲಿಲ್ಲ. ಸೈಕಲನ್ನು ಅವನಿಂದ ತೆಗೆದುಕೊಂಡು ಪಕ್ಕಕ್ಕೆ ನಿಲ್ಲಿಸಿ ಬೀಗಹಾಕಿ ಹೋಟೆಲಿನೊಳಗೆ ನುಸುಳಿಬಿಟ್ಟರು. ಅವರನ್ನು ಹಿಂಬಾಲಿಸುತ್ತಿರುವುದರ ಹೊರತು ಮುತ್ತುಸಾಮಿಗೆ ಬೇರೆ ದಾರಿ ಕಾಣಲಿಲ್ಲ.

ಅವನು ಒಂದು ದೋಸೆ ತಿಂದು ಮುಗಿಸುವುದರೊಳಗೆ ಅವನಪ್ಪ ಒಂದು ಸೆಟ್ ಪೂರಿಯನ್ನೂ, ಒಂದು ದೋಸೆಯನ್ನೂ, ಒಂದು ಪ್ಲೇಟ್ ಉಪ್ಪಿಟ್ಟನ್ನೂ ತಿಂದು ತೇಗಿದರು. 'ತಿನ್ನೋ ಲಕ್ಷಣಾನ ಇದು? ಕೋಳಿ ಕೆರೆಯೊ ತರಾ ಕೆರೀತ ಇದ್ರೆ ಯಾವ ಕಾಲಕ್ಕೆ ನೀನು ತಿಂದು ಮುಗಿಸೋದು?' ಎಂದು ಹೇಳುತ್ತಲೇ ಕೈತೊಳೆಯಲು ಹೋದರು. ಮತ್ತೆ ಬೆಂಚಿನಲ್ಲಿ ಬಂದು ಕುಳಿತು ಒಂದು ಟೀ ಕುಡಿದರು. ಆಗತಾನೇ ಅವನು ಎದ್ದು ಹೋಗಿ ಕೈತೊಳೆದು ಹಿಂತಿರುಗಿದ. ಮನಸಿನ ಆಳದಲ್ಲಿ ಅವನ ಹೆದರಿಕೆ ಹಾಗೆಯೇ ಇತ್ತು.

ಸೈಕಲ್ ಬೀಗವನ್ನು ತೆಗೆದು ಮತ್ತೆ ತಳ್ಳುತ್ತಾ ನಡೆದ. ಆಸ್ಪತ್ರೆಯ ಮೈದಾನವನ್ನು ದಾಟುವಾಗ ಅಪ್ಪ ಮತ್ತೆ 'ನಿಲ್ಲೋ' ಎಂದರು. ಅಭ್ಯಾಸದಂತೆ ಸ್ವಲ್ಪ ದೂರ ಮುಂದೆ ಹೋಗಿ ಗಾಡಿಯನ್ನು ನಿಲ್ಲಿಸಿದ. 'ಈ ಜಾಗ ಚೆನ್ನಾಗಿದೆ ನೋಡು, ನಿನಗೆ ಸೈಕಲ್ ಓಡಿಸಲು ಕಲ್ಸಿಕೊಡುತ್ತೇನೆ ಬಾ' ಎಂದು ಹತ್ತಿರ ಬಂದರು.

ಆ ಸಮಯದಲ್ಲಿ ಮುತ್ತುಸಾಮಿಗೆ ಕಿಬ್ಬೊಟ್ಟೆ ತೊಳೆಸಲು ಶುರುವಾಯಿತು. ಸೈಕಲ್ ಕಲಿಯಲು ಹೋದಾಗಿನ ಮೊದಲ ಅನುಭವಗಳೆಲ್ಲವೂ ಕಹಿಯಾಗಿದ್ದವು. ಮೊದಲೇ ಆದ ಗಾಯಗಳು ಇನ್ನೂ ಮಾಸೇ ಇರಲಿಲ್ಲ. ಮೆಲ್ಲನೆಯ ದನಿಯಲ್ಲಿ 'ಆಮೇಲೆ ಕಲ್ತೋತೀನಪ್ಪ. ಮುಂದಿನವಾರ ಸ್ಕೂಲ್ ಟೆಸ್ಟ್‌ಗಳು ಇದೆ. ತುಂಬಾ ಓದಬೇಕಪ್ಪ' ಎಂದು ಅವರನ್ನು ನೋಡಿ ಗೆಂಜಿದ.

'ಅದರ ಪಾಡಿಗದು, ಇದರ ಪಾಡಿಗಿದು. ನನ್ನ ಹಿಂದೇ ಬಾ ಹೇಳ್ತೀನಿ' ಎನ್ನುತ್ತಾ ಅವರು ಮೈದಾನದಲ್ಲಿ ಇಳಿದುಬಿಟ್ಟರು.

'ಪೆಡಲ್‌ನಲ್ಲಿ ಕಾಲಿಟ್ಟು ಹತ್ತೋಕ್ಕೆ ನನಗಿನ್ನೂ ಬರಲ್ಲಾ. ಈಗ ಯಾತಕ್ಕಪ್ಪ ಸೈಕಲ್?'

'ಯಾವ್ದನ್ನೂ ಹತ್ತು ಹದಿನೈದು ಸಲ ಮಾಡಿ ನೋಡಿದ್ರೆ ತಾನೇ ಬರೋದು. ಓದೋ ಹುಡುಗಾ ನೀನು ಬರಲ್ಲ, ಬರಲ್ಲಾಂತನೇ ಶುರುಮಾಡಿದ್ರೆ ಬದುಕಲ್ಲಿ ಯಾವುತಾನೇ ಬರುತ್ತೆ ಹೇಳು?'